ಅಸಲು ದಾವೆ ನಂ.307/2022          ಡಿ .ಡಬ್ಲ್ಯೂ:2-   ಬಸವ್ವ ಕೋಂ ಈರಪ್ಪ ಹಕಾರಿ

**ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 04/04/2026 ರಂದು ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ -6 ನೇ ಪ್ರತಿವಾದಿ ಪರ ಶ್ರೀ RSS ವಕೀಲರಿಂದಃ**

ನಾನು ಈ ದಾವೆಯಲ್ಲಿ 6 ನೇ ಪ್ರತಿವಾದಿ ಇರುತ್ತೇನೆ. ನಾನು ಈ ದಿನ ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮುಖಾಂತರ ಸಲ್ಲಿಸಿರುತ್ತೇನೆ. ನಾನು ಸದರಿ ಸಾಕ್ಷಿ ಪ್ರಮಾಣ ಪತ್ರದಲ್ಲಿರುವ ಮಾಹಿತಿಯನ್ನು ತಿಳಿದುಕೊಂಡು ಸದರಿ ಪ್ರಮಾಣ ಪತ್ರಕ್ಕೆ ಸಹಿಯನ್ನು ಮಾಡಿರುತ್ತೇನೆ.

ಈ ದಾವೆಯನ್ನು ನನ್ನ ಪರವಾಗಿ ಡಿಕ್ರಿ ಮಾಡಬೇಕೆಂದು ಮಾನ್ಯ ನ್ಯಾಯಾಲಯಕ್ಕೆ ಕೇಳಿಕೊಳ್ಳುತ್ತೇನೆ.

**ಪಾಟೀ ಸವಾಲುಃ   ವಾದಿ ಪರ ವಕೀಲರಾದ ಶ್ರೀ ಆರ್ ಕೆ ಬಿ ರವರಿಂದಃ**

ದಾವಾ ಆಸ್ತಿಯು ಕುರಹಟ್ಟಿ ಗ್ರಾಮದಲ್ಲಿ ಇರುತ್ತದೆ. ದಾವಾ ಆಸ್ತಿಯು 8 ಎಕರೆ ಆಸ್ತಿಯ ಪೈಕಿ 2 ಎಕರೆಯನ್ನು ಮಾರಾಟ ಮಾಡಿರುತ್ತಾರೆ. ಈಗ 6 ಎಕರೆ 6 ಗುಂಟೆ ಇರುತ್ತದೆ. ನಮ್ಮ ತಂದೆಯವರಿಗೆ ನಾವು ಮೂರು ಜನ ಮಕ್ಕಳು. ಅವರ ಹೆಸರು ನಾನು , ಕಲ್ಲವ್ವ ಮತ್ತು ನಿಂಗಪ್ಪ ಆಗಿರುತ್ತದೆ. ಸದರಿ ಆಸ್ತಿಯು ನಮ್ಮ ಅಜ್ಜನಿಂದ ನನ್ನ ತಂದೆಯವರಿಗೆ ಬಂದಿರುತ್ತದೆ. ನನ್ನ ಸಹೋದರರು ನನ್ನ ಸಹಿ ಪಡೆದುಕೊಂಡು ಆಸ್ತಿಯನ್ನು ಅವರ ಹೆಸರಿಗೆ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಸಹೋದರ ನಿಂಗಪ್ಪರವರು ಯಾವ ಇಸ್ವಿಯಲ್ಲಿ ನಿಧನರಾಗಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ ನಾನು ನನ್ನ ಅಣ್ಣನ ಮಕ್ಕಳು ಎಲ್ಲರೂ ಸೇರಿಕೊಂಡು ಸಾಗುವಳಿ ಮಾಡಿಕೊಂಡು ಇರುತ್ತವೆ ಎಂದರೆ ಸರಿ.

**ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿ ಅದೆ.

**(ವಿಜಯಕುಮಾರ ಎನ್ )**
**ಹೆಚ್ಚುವರಿ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ**
**ನ್ಯಾಯಾಧೀಶರು ರೋಣ.**